

ಹೀಗಿರುವಾಗ ಇಂದಿನ ಆಧುನಿಕ ಯುವತಿಯರು ತಮ್ಮ ಕಿವಿಯೋಲೆಗಳಲ್ಲಿಯೂ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಇಂಥ ಪ್ರಯೋಗದ ಒಂದು ಭಾಗವೇ ಇದೀಗ ಟ್ರೆಂಡ್‌ನಲ್ಲಿರುವ ಸಮ್ಮರ್ ಕೂಲ್ ಕೋನ್ ಐಸ್‌ಕ್ರೀಮ್ ಕಿವಿಯೋಲೆ.

ಆಧುನಿಕ ಮಹಿಳೆಯರು ಸೀಸನ್‌ಗೆ ತಕ್ಕಂತೆ ಅಪ್‌ಡೇಟ್ ಆಗಲು ಬಯಸುತ್ತಿದ್ದಾರೆ. ಇಂಥವರಿಗೆ ಇದೀಗ ಸಮ್ಮರ್ ಕೂಲ್ ಇಯರಿಂಗ್ಸ್ ಮಾರುಕಟ್ಟೆಗೆ ಎಂಟ್ರಿ ಕೊಟ್ಟಿವೆ. ಅವುಗಳೆಂದರೆ, ಸಮ್ಮರ್‌ಗೆ ಕೂಲ್ ಲುಕ್ ನೀಡುವ ಐಸ್‌ಕ್ರೀಮ್ ಇಯರಿಂಗ್ಸ್‌ಗಳು. ಬೇಸಿಗೆಯಲ್ಲಿ ಎಲ್ಲರೂ ಅತಿಯಾಗಿ ಇಷ್ಟಪಟ್ಟು ತಿನ್ನುವ ಐಸ್‌ಕ್ರೀಮ್ ಅನ್ನೇ ಫ್ಯಾಷನ್ ಮಾಡಲು ಹೊರಟಿರುವ ಫ್ಯಾಷನಿಸ್ಟ್‌ಗಳು ಕೋನ್ ಐಸ್‌ಕ್ರೀಮ್ ಅನ್ನೇ ಥೀಮ್ ಆಗಿ ಇಟ್ಟುಕೊಂಡು ಅವುಗಳನ್ನೇ ಹೋಲುವ ಕಿವಿಯೋಲೆಗಳನ್ನು ಮಾರುಕಟ್ಟೆಗೆ ತಂದಿದ್ದಾರೆ.

ಯುವತಿಯರು, ಚಿಕ್ಕಮಕ್ಕಳ ಹಾಟ್ ಫೇವರೆಟ್ ಎಂದೆನಿಸಿಕೊಳ್ಳುವ ಐಸ್‌ಕ್ರೀಮ್‌ಗಳನ್ನು ಕಿವಿಯೋಲೆ ರೂಪದಲ್ಲಿ ಧರಿಸಿಕೊಳ್ಳಲು ನಾ ಮುಂದೆ ತಾ ಮುಂದೆ ಎಂಬಂತಿರುವ ಯುವತಿಯರ ದಂಡು ಇದೀಗ ಈ ತರಹದ ಕೋನ್ ಐಸ್‌ಕ್ರೀಮ್ ಕಿವಿಯೋಲೆ ಖರೀದಿಗಾಗಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದಾರೆ. ಕೋನ್ ಮೇಲೆ ಸಿಂಗಲ್ ಲೇಯರ್ ಐಸ್‌ಕ್ರೀಮ್, ಡಬಲ್ ಲೇಯರ್ ಐಸ್‌ಕ್ರೀಮ್ ಹಾಗೂ ಮೂರು ನಾಲ್ಕು ಲೇಯರ್‌ಗಳುಳ್ಳ ಐಸ್‌ಕ್ರೀಮ್ ವಿನ್ಯಾಸದ ಕಿವಿಯೋಲೆಗಳನ್ನು ತಮ್ಮ ದಿನನಿತ್ಯದ ಉಡುಪುಗಳ ಜೊತೆ ಮ್ಯಾಚ್ ಮಾಡಿ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಆನ್‌ಲೈನ್ ಮತ್ತು ಮಾರುಕಟ್ಟೆಯಲ್ಲಿ ಅನಾವರಣಗೊಂಡಿರುವ ನವೀನ ವಿನ್ಯಾಸದ ಐಸ್‌ಕ್ರೀಮ್ ಇಯರಿಂಗ್ಸ್ ಸೀಸನ್‌ನ ಫ್ಯಾಷನ್ ಆಕ್ಸೆಸರೀಸ್‌ನಲ್ಲಿ ಟಾಪ್ ಲಿಸ್ಟ್‌ನಲ್ಲಿವೆ.

ಬಣ್ಣಬಣ್ಣದ ಹರಳುಗಳು, ಬೀಡ್ಸ್, ಪರ್ಲ್, ಕ್ರಿಸ್ಟಲ್ಸ್, ವುಡನ್, ಸ್ಟೀಲ್, ಸಿಲ್ವರ್ ಮೆಟಲ್, ಗೋಲ್ಡ್, ಮೆಟಲ್, ಬ್ಲಾಕ್ ಮೆಟಲ್‌ಗಳ ರೆಡಿಮೇಡ್ ಮತ್ತು ಹ್ಯಾಂಡ್‌ಮೇಡ್ ಸ್ಟಡ್ಸ್ ಮತ್ತು ಹ್ಯಾಂಗಿಂಗ್ಸ್ ಐಸ್‌ಕ್ರೀಮ್ ಇಯರಿಂಗ್ಸ್ ನೋಡಲು ಆಕರ್ಷಕವಾಗಿದ್ದು, ಕಾಲೇಜು ಯುವತಿಯರನ್ನು ಹೆಚ್ಚಾಗಿ ಆಕರ್ಷಿಸುತ್ತಿವೆ. ಅದರಲ್ಲೂ ಕೋನ್ ಶೇಪ್ ಡ್ರಾಪ್ ಇಯರಿಂಗ್ಸ್ ಹೆಚ್ಚು ಟ್ರೆಂಡಿಯಾಗಿದೆ. ಚಾಕೊಲೇಟ್, ಸ್ಟ್ರಾಬೆರಿ, ವೆನಿಲಾ, ಪಿಸ್ತಾ ಇನ್ನಿತರ ಐಸ್‌ಕ್ರೀಮ್ ಫ್ಲೇವರ್‌ನ ತಿಳಿ ಹಾಗೂ ಗಾಢ ಬಣ್ಣಗಳನ್ನು ಉಪಯೋಗಿಸಿ ವಿನ್ಯಾಸಗೊಳಿಸಿರುವ ಐಸ್‌ಕ್ರೀಮ್ ಕಿವಿಯೋಲೆ ಯೂನಿಕ್ ಲುಕ್ ನೀಡುತ್ತವೆ. ನಿಮಗಿಷ್ಟವಾದ ಫ್ಲೇವರ್ ಹಾಗೂ ಉಡುಪಿಗೆ ಮ್ಯಾಚ್ ಆಗುವ ಈ ಕೋನ್ ಐಸ್‌ಕ್ರೀಮ್ ಇಯರಿಂಗ್ಸ್ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿವೆ.



ಈ ತರಹದ ಕೋನ್ ಐಸ್‌ಕ್ರೀಮ್ ಇಯರಿಂಗ್ಸ್ ಹೆಚ್ಚಾಗಿ ಆಧುನಿಕ ಉಡುಪುಗಳಿಗೆ ಮ್ಯಾಚ್ ಆಗುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಜೀನ್ಸ್, ಲಾಂಗ್ ಟಾಪ್ಸ್, ಶಾರ್ಟ್ ಟಾಪ್ಸ್, ಪಲಾಜೊ, ಮಿಡಿ, ಫ್ರಾಕ್‌ಗಳ ಮೇಲೆ ಸಖತ್ತಾಗಿ ಕಾಣುತ್ತವೆ. ಕಾರ್ಪೊರೇಟ್ ಕಂಪನಿಗಳಲ್ಲಿ ಯುವತಿಯರು ಟ್ರೆಡಿಷನಲ್ ಸೀರೆಗೂ ಈ ತರಹದ ಐಸ್‌ಕ್ರೀಮ್ ಕಿವಿಯೋಲೆಗಳನ್ನು ಮ್ಯಾಚ್ ಮಾಡಿ ಹೊಸ ಟ್ರೆಂಡ್‌ಗೆ ನಾಂದಿ ಹಾಡಿದ್ದಾರೆ. ಸೆಲೆಬ್ರಿಟಿಗಳು, ಸಿನಿಮಾ ತಾರೆಯರು, ಮಾಡಲಿಂಗ್ ಜಗತ್ತಿನ ಫ್ಯಾಷನ್ ದಿವಾಗಳು ಈ ತರಹದ ಸಮ್ಮರ್ ಕೂಲ್ ಇಯರಿಂಗ್ಸ್ ಧರಿಸಿ ರ‍್ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡಿ ಭೇಷ್ ಎನಿಸಿಕೊಂಡಿದ್ದಾರೆ. ಈ ತರಹದ ಕಿವಿಯೋಲೆ ಧರಿಸಿ ಇನ್‌ಸ್ಟಾದಲ್ಲಿ ಅಪ್‌ಲೋಡ್ ಮಾಡಿ ಮಿಲಿಯನ್‌ಗಟ್ಟಲೆ ಲೈಕ್ ಪಡೆದುಕೊಂಡಿದ್ದಾರೆ. ಈ ತರಹದ ಸೆಲೆಬ್ರಿಟಿಗಳನ್ನು ಫಾಲೋ ಮಾಡುವ ಇಂದಿನ ಪೀಳಿಗೆ ಈ ತರಹದ ಇಯರಿಂಗ್ಸ್ ಧರಿಸುವುದರಲ್ಲಿ ಅನುಮಾನವೇ ಇಲ್ಲ.

ಚಿಕ್ಕ ಚಿಕ್ಕ ಹೆಣ್ಣು ಮಕ್ಕಳಿಗಂತೂ ಐಸ್‌ಕ್ರೀಮ್ ಎಂದರೆ ಎಲ್ಲಿಲ್ಲದ ಪ್ರೀತಿ.



ಮಕ್ಕಳೂ ಇದೀಗ ಪುಟ್ಟ ಪುಟ್ಟ ಐಸ್‌ಕ್ರೀಮ್ ವಿನ್ಯಾಸದ ಇಯರಿಂಗ್ಸ್ ಧರಿಸಿ ಓಡಾಡುತ್ತಿದ್ದಾರೆ. ಉಡುಪಿಗೆ ಮ್ಯಾಚ್ ಆಗುವ ಕೋನ್ ಐಸ್‌ಕ್ರೀಮ್ ವಿನ್ಯಾಸದ ಕಿವಿಯೋಲೆ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಈ ತರಹದ ಕಿವಿಯೋಲೆಗಳನ್ನು ಗೆಳತಿಯರಿಗೆ ಗಿಫ್ಟ್ ಕೊಡಲು ಕೂಡ ತುಂಬಾ ಚೆನ್ನಾಗಿರುತ್ತವೆ. ಈ ಕಿವಿಯೋಲೆಗೆ ಮ್ಯಾಚ್ ಆಗುವ ಬ್ರೇಸ್‌ಲೆಟ್‌ಗಳು, ಬ್ಯಾಂಗಲ್‌ಗಳು, ಹೇರ್‌ಬ್ಯಾಂಡ್ ಕೂಡ ಮಾರುಕಟ್ಟೆಯಲ್ಲಿ ಲಭ್ಯವಿವೆ. ಕೂಲ್ ಕೂಲ್ ಎನಿಸುವ ಐಸ್‌ಕ್ರೀಮ್‌ನಂತೆ ಇದೇ ಮಾದರಿಯ ವಿನ್ಯಾಸದ ಒಡವೆಗಳನ್ನು ತೊಟ್ಟು ಮಿಂಚಬಹುದಲ್ಲವೇ?